

ಜನಪ್ರಿಯ ಗ್ರಾಮೀಣ ಕ್ರೀಡೆ ಕಬಡ್ಡಿಗೆ ಮಣ್ಣಿನ ಹಾಸೇ ಸಾಂಪ್ರದಾಯಿಕ ಅಂಗಣ. ಕಬಡ್ಡಿಯನ್ನು ನೋಡಲು ನೂರಾರು ಜನ ಕಿಕ್ಕಿರಿದು ನೋಡುತ್ತಿದ್ದುದೂ ಉಂಟು.

ಭಟ್ಕಳದ ಗ್ರಾಮೀಣ ಪ್ರತಿಭೆ **ರಂಜಿತ್ ನಾಯ್ಕ** ಈಗ 'ಪಟ್ನಾ ಪೈರೇಟ್ಸ್' ತಂಡದ ಸದಸ್ಯ



ಎಂದು 'ಸುಧಾ'ದೊಂದಿಗೆ ಮಾತನಾಡಿದ ವಿಶ್ವಾಸ್ ಹೇಳಿದರು. ಅಂದಹಾಗೆ, ವಿಶ್ವಾಸ್ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ.

ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮೂಡು ಭಟ್ಕಳ ಗ್ರಾಮದ ರಂಜಿತ್ ನಾಯ್ಕ ಅವರ ಕಥೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಆಳ್ವಾಸ್‌ನಲ್ಲಿ ಮೊದಲ ವರ್ಷದ ಬಿ.ಕಾಂ. ಓದುತ್ತಿರುವ ರಂಜಿತ್ ಈಗ 'ಪಟ್ನಾ ಪೈರೇಟ್ಸ್' ತಂಡದಲ್ಲಿದ್ದಾರೆ. ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್, ಅಂತರ ವಿಶ್ವವಿದ್ಯಾಲಯಗಳ ನಡುವಿನ ಅಖಿಲ ಭಾರತಮಟ್ಟದ ಟೂರ್ನಿ, ದಕ್ಷಿಣ ವಲಯದ ಪಂದ್ಯಗಳಲ್ಲಿ ಆಡಿದ್ದಾರೆ. ತಾಯಿ ಗೃಹಿಣಿಯಾಗಿದ್ದು, ತಂದೆ ತಮ್ಮದೇ ಟ್ರಕ್ ನಿರ್ವಹಣೆ ಮಾಡುತ್ತಾರೆ.

ಶಾಲಾ ಹಂತದಿಂದಲೇ ಕಬಡ್ಡಿ ಆಡುತ್ತಿದ್ದ ರಂಜಿತ್ ಪ್ರತಿಭಾನ್ವಿತನಾಗಿದ್ದರೂ ಗ್ರಾಮದಲ್ಲಿ ಬಹಳಷ್ಟು ಜನ ಗುರುತಿಸಿರಲಿಲ್ಲ. ಸ್ವಂತ ಹಣ ಖರ್ಚು ಮಾಡಿಕೊಂಡು ಟೂರ್ನಿಗಳಲ್ಲಿ ಪಾಲ್ಗೊಳ್ಳಬೇಕಾದ ಅನಿವಾರ್ಯತೆಯಿತ್ತು. ಈಗ ಪಂಚತಾರಾ ಹೋಟೆಲ್‌ಗಳಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಆಟಗಾರರ ಜೊತೆ ದಿನಗಳನ್ನು ಕಳೆಯುತ್ತಿದ್ದಾರೆ. ಅವರ ಅನುಭವಗಳನ್ನು ಕಲಿತುಕೊಳ್ಳುತ್ತಿದ್ದಾರೆ.

'ಪ್ರೊ ಕಬಡ್ಡಿಯಲ್ಲಿ ಅವಕಾಶ ಸಿಕ್ಕಿದ್ದು ಹೆಮ್ಮೆಯ ವಿಷಯ. ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಬೇಕು ಎನ್ನುವ ಹೆಗ್ಗುರಿಯಿದೆ. ನನ್ನ ಆಸೆಗೆ ಈ ಟೂರ್ನಿ ವೇದಿಕೆಯಾಗಲಿದೆ. ಹಿರಿಯ ಆಟಗಾರರು ಹಾಗೂ ಪಟ್ನಾ ತಂಡದ ಕೋಚ್ ರವಿಶೆಟ್ಟಿ ಸರ್ ಅವರಿಂದ ಕಲಿಯುವುದು ಸಾಕಷ್ಟಿದೆ' ಎನ್ನುತ್ತಾರೆ ರಂಜಿತ್.

ಇವು ಉದಾಹರಣೆಗಳಷ್ಟೇ. ಇವರ ಜೊತೆಗೆ ಕರ್ನಾಟಕದ ಅನೇಕ ಆಟಗಾರರು ಲೀಗ್‌ನಲ್ಲಿ ಛಾಪು ಮೂಡಿಸಿದ್ದಾರೆ. ರಿಶಾಂಕ್ ದೇವಾಡಿಗ, ಬೆಂಗಳೂರಿನ ಜೀವಕುಮಾರ, ಪ್ರಶಾಂತ್ ರೈ, ಸಚಿನ್ ವಿಟ್ಲ, ಮನೋಜ್ ಗೌಡ, ಆನಂದ್ ವಿ., ಜೆ. ದರ್ಶನ್, ರತನ್ ಕೆ., ಪವನ್ ಕುಮಾರ್, ಚೇತನ್, ಕೆ. ಪ್ರಪಂಚನ್, ರಾಕೇಶ್ ಕುಮಾರ್ ಸೇರಿದಂತೆ ಅನೇಕ ಆಟಗಾರರು 'ಪ್ರೊ ಕಬಡ್ಡಿ'ಯಲ್ಲಿ ಆಡಿದ್ದಾರೆ, ಅಂಗಳದಲ್ಲಿ ಮಿಂಚು ಹರಿಸಿದ್ದಾರೆ.

ಬೇರೆ ರಾಜ್ಯಗಳ ಆಟಗಾರರಿಗೂ 'ಪ್ರೊ ಕಬಡ್ಡಿ' ಲೀಗ್ ಬದುಕು ರೂಪಿಸಿಕೊಟ್ಟಿದೆ. 2014ರಲ್ಲಿ ಏಷ್ಯನ್ ಕ್ರೀಡಾಕೂಟಕ್ಕಾಗಿ ಭಾರತ ತಂಡವನ್ನು ಆಯ್ಕೆ ಮಾಡಲು ಬೆಂಗಳೂರಿನಲ್ಲಿ ಶಿಬಿರ ನಡೆದಿತ್ತು. 'ಪ್ರೊ ಕಬಡ್ಡಿ'ಯಲ್ಲಿ ಗಮನಾರ್ಹ ಪ್ರದರ್ಶನ ತೋರಿದ್ದ ದೀಪಕ್ ಹೂಡಾ ಅವರನ್ನು ಮೊದಲ ಸಲ ಶಿಬಿರಕ್ಕೆ ಕರೆಯಲಾಗಿತ್ತು. ಬಳಿಕ ದೀಪಕ್ ಬದುಕಿನ ಹಾದಿಯೇ ಬದಲಾಯಿತು. ಹರಿಯಾಣದ ರೋಹ್ಟಕ್ ಜಿಲ್ಲೆಯ ಚಮಾರಿಯಾ ಗ್ರಾಮದ ಆಲ್‌ರೌಂಡ್ ಆಟಗಾರ 'ಪ್ರೊ ಕಬಡ್ಡಿ' ಬಳಿಕ ರಾಷ್ಟ್ರೀಯ ತಂಡದಲ್ಲಿ ಮಿಂಚಿದರು. ವಿಶ್ವಕಪ್, ಏಷ್ಯನ್ ಗೇಮ್ಸ್, ಏಷ್ಯನ್ ಚಾಂಪಿಯನ್‌ಷಿಪ್, ದುಬೈ ಕಬಡ್ಡಿ ಮಾಸ್ಟರ್ಸ್ ಮತ್ತು ಸೌತ್ ಏಷ್ಯನ್ ಗೇಮ್ಸ್ ಹೀಗೆ ಅನೇಕ ಟೂರ್ನಿಗಳಲ್ಲಿ ಆಡಿದರು. ಇವರು ಆಡಿದ ಮಹತ್ವದ ಆರು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಭಾರತ ತಂಡ ಐದರಲ್ಲಿ ಚಿನ್ನ ಮತ್ತು ಒಂದರಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಹಿಂದಿನ ಎಂಟು ಆವೃತ್ತಿಗಳಿಂದ ಒಟ್ಟು ಹೆಚ್ಚು ಅಂಕಗಳನ್ನು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಮೊದಲ ಹತ್ತು ಸ್ಥಾನಗಳಲ್ಲಿರುವ ಪ್ರದೀಪ್ ನರ್ವಾಲ್, ಪವನ್ ಶೆರಾವತ್, ರಾಹುಲ್ ಚೌಧರಿ, ಮಣಿಂದರ್ ಸಿಂಗ್, ಅಜಯ್ ಠಾಕೂರ್, ರೋಹಿತ್ ಕುಮಾರ್, ನವೀನ್ ಕುಮಾರ್, ರಿಶಾಂಕ್ ದೇವಾಡಿಗ ಹಾಗೂ ಸಚಿನ್ ತನ್ವರ್ ಹೀಗೆ ಬಹಳಷ್ಟು ಆಟಗಾರರು ಗ್ರಾಮೀಣ ಪ್ರದೇಶಗಳಿಂದ ಬಂದವರು. ಇವರಲ್ಲಿ ಬಹುತೇಕರು ಪ್ರೊ ಕಬಡ್ಡಿ ಮತ್ತು ರಾಷ್ಟ್ರೀಯ ತಂಡ ಎರಡರಲ್ಲಿಯೂ ಹೆಸರು ಮಾಡಿದವರು.

ದೇಸಿ ಆಟವೊಂದು ಆಧುನಿಕ ಪೋಷಾಕಿನಲ್ಲಿ ಜನಮನ ಸೆಳೆದಿರುವ 'ಪ್ರೊ ಕಬಡ್ಡಿ' ಲೀಗ್‌ನ ಯಶೋಗಾಥೆ ಉಳಿದ ದೇಸಿ ಆಟಗಳನ್ನು ಜನಪ್ರಿಯಗೊಳಿಸುವುದಕ್ಕೂ ಪ್ರೇರಣೆಯಾಗಬೇಕು. ಅಂಥ ಪ್ರಯತ್ನಗಳು, ಗ್ರಾಮೀಣ ಪ್ರತಿಭೆಗಳ ಪ್ರತಿಭಾ ಪ್ರದರ್ಶನಕ್ಕೂ ಸಹಕಾರಿ.

ಪ್ರತಿಕ್ರಿಯಿಸಿ: **feedback@sudha.co.in**